All India Radio: Bangalore
National Bulletin In Kannada
11.05.2024: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

11.05.2024: 7.35AM

********

**ಮುಖ್ಯಾಂಶಗಳು:**

1. ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ನಿರ್ಣಾಯಕ ಅವಧಿ ಅತ್ಯಂತ ಪ್ರಮುಖ - ರಾಷ್ಟ್ರಪತಿ ದ್ರೌಪದಿ ಮುರ್ಮು
2. ಒಡಿಶಾದ ಭುವನೇಶ್ವರದಲ್ಲಿಂದು ಪ್ರಧಾನಮಂತ್ರಿ ನರೇಂದ್ರ ಮೋದಿ ರೋಡ್‌ಶೋ; ವಿವಿಧೆಡೆ ರಾಜಕೀಯ ನಾಯಕರಿಂದ ಚುನಾವಣಾ ಪ್ರಚಾರ
3. ಗುಜರಾತ್‌ನ ದಾಹೋದ್ ಲೋಕಸಭಾ ಕ್ಷೇತ್ರದ ಪ್ರಥಮಪುರದಲ್ಲಿ ಇಂದು ಮರು ಮತದಾನ
4. ಐಪಿಎಲ್ ಟಿ-೨೦ ಕ್ರಿಕೆಟ್: ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ ತಂಡಕ್ಕೆ ೩೫ ರನ್‌ಗಳ ಗೆಲುವು

***********

ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ಗೋಲ್ಡನ್ ಅವರ್‌ನ ಪ್ರಾಮುಖ್ಯತೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಒತ್ತಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಯ ೨೨ನೇ ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಈ ನಿರ್ಣಾಯಕ ಅವಧಿಯಲ್ಲಿ ಚಿಕಿತ್ಸೆ ಪಡೆದರೆ, ರೋಗಿಗಳ ಜೀವವನ್ನು ಉಳಿಸಬಹುದು ಎಂದು ಹೇಳಿದರು. ತಜ್ಞ ವೈದ್ಯರು ತುರ್ತು ರೋಗಿಗಳ ಬಗ್ಗೆ ಸಂವೇದನಾಶೀಲರಾಗಿರಬೇಕು. ವೈದ್ಯರು ಎಂದಿಗೂ ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಯನ್ನು ಚಿಕಿತ್ಸೆಗಾಗಿ ಬೇರೆಡೆಗೆ ಹೋಗಲು ಹೇಳಬಾರದು ಎಂದರು. ಆರೋಗ್ಯ ಕ್ಷೇತ್ರದಲ್ಲಿ, ಸಮಯವು ಹೆಚ್ಚು ಮುಖ್ಯವಾಗಿದೆ. ಏಕೆಂದರೆ ವಿಳಂಬವಾದ ಚಿಕಿತ್ಸೆಯು ಜೀವಕ್ಕೆ ಅಪಾಯವಾಗಬಹುದು ಎಂದು ದ್ರೌಪದಿ ಮುರ್ಮು ಹೇಳಿದರು. ವೈದ್ಯರು ಬಡ ರೋಗಿಗಳಿಗೆ ತಮ್ಮ ಸಮಯವನ್ನು

ಉಚಿತವಾಗಿ ನೀಡುವ ಮೂಲಕ ದೇಶ ಮತ್ತು ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಬಹುದು ಎಂದರು. ದೇಶದ ಅಪಾರ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ವೈದ್ಯರ ಲಭ್ಯತೆಯನ್ನು ನಿರಂತರವಾಗಿ ಹೆಚ್ಚಿಸುವ ಅಗತ್ಯವಿದೆ ಎಂದು ರಾಷ್ಟ್ರಪತಿಗಳು ಹೇಳಿದರು. ಭಾರತೀಯ ವೈದ್ಯರು ಜಾಗತಿಕವಾಗಿ ತಮ್ಮ ಛಾಪು ಮೂಡಿಸಿದ್ದಾರೆ. ಕೈಗೆಟುಕುವ ವೈದ್ಯಕೀಯ ಸೌಲಭ್ಯದ ಕಾರಣದಿಂದಾಗಿ, ಭಾರತವು ವೈದ್ಯಕೀಯ ಪ್ರವಾಸೋದ್ಯಮದ ಪ್ರಮುಖ ಕೇಂದ್ರವಾಗಿದೆ ಎಂದು ದ್ರೌಪದಿ ಮುರ್ಮು ಹೇಳಿದರು.

***********

ಒಡಿಶಾದಲ್ಲಿ ಎರಡು ದಿನಗಳ ಪ್ರಚಾರಕ್ಕಾಗಿ ಪ್ರಧಾನಮಂತ್ರಿ ಮತ್ತು ಬಿಜೆಪಿಯ ಹಿರಿಯ ನಾಯಕ ನರೇಂದ್ರ ಮೋದಿ ನಿನ್ನೆ ಸಂಜೆ ಒಡಿಶಾದ ಭುವನೇಶ್ವರ ತಲುಪಿದ್ದಾರೆ. ಇದೇ ೧೩ರಿಂದ ಆರಂಭವಾಗಿ ನಾಲ್ಕು ಹಂತಗಳಲ್ಲಿ ಒಡಿಶಾದಲ್ಲಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಜರುಗಲಿವೆ. ಭುವನೇಶ್ವರದಲ್ಲಿ ಇಂದು ಮಧ್ಯಾಹ್ನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೋಡ್‌ಶೋ ನಡೆಸಲಿದ್ದಾರೆ. ಇದಕ್ಕಾಗಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಬಳಿಕ ನರೇಂದ್ರ ಮೋದಿ ಅವರು ರಾಜ್ಯದ  ಕಂಧಮಾಲ್, ಬಲಂಗೀರ್ ಮತ್ತು ಬರ್ಗಢ ಲೋಕಸಭಾ ಕ್ಷೇತ್ರಗಳಲ್ಲಿ ಮೂರು ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಇದೇ ೧೩, ೨೦, ೨೫ ಮತ್ತು ಜೂನ್ ೧ರಂದು ನಾಲ್ಕು ಹಂತಗಳಲ್ಲಿ ಒಡಿಶಾದಲ್ಲಿ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ನಡೆಯಲಿವೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಂದು ವಿವಿಧೆಡೆ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಲಿದ್ದಾರೆ.

***********

ಕಳೆದ ೧೦ ವರ್ಷಗಳಲ್ಲಿ ದೇಶದಲ್ಲಿ ಹಲವು ಸಮಸ್ಯೆಗಳನ್ನು ಬಗೆಹರಿಸಿರುವ ದಾಖಲೆ ಬಿಜೆಪಿಗಿದೆ ಎಂದು ಪ್ರಧಾನಮಂತ್ರಿ ಮತ್ತು ಬಿಜೆಪಿ ಹಿರಿಯ ನಾಯಕ ನರೇಂದ್ರ ಮೋದಿ ಹೇಳಿದ್ದಾರೆ. ಹೈದರಾಬಾದ್‌ನ ಎಲ್‌ಬಿ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಕಾಂಗ್ರೆಸ್ ತನ್ನ ಹಿಂದಿನ ಅಧಿಕಾರಾವಧಿಯಲ್ಲಿ ಕುಟುಂಬ ರಾಜಕಾರಣ ಮತ್ತು ಭ್ರಷ್ಟಾಚಾರದ ದಾಖಲೆಯನ್ನು ಹೊಂದಿದೆ ಎಂದು ದೂರಿದರು. ಕಾಂಗ್ರೆಸ್ ದೇಶವನ್ನು

ಜಾತಿ, ಜನಾಂಗ ಮತ್ತು ಧರ್ಮದ ಆಧಾರದ ಮೇಲೆ ವಿಭಜಿಸುತ್ತಿದೆ ಎಂದು ಆರೋಪಿಸಿದರು. ಬಾಹ್ಯಾಕಾಶ, ಆರ್ಥಿಕತೆ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತ ಈಗ ಶಕ್ತಿಶಾಲಿಯಾಗಿದೆ. ಭಾರತದ ಕಲ್ಪನೆಯು ವಸುಧೈವ ಕುಟುಂಬಕಂ, ಸತ್ಯಮೇವ ಜಯತೇ, ಬುದ್ಧಂ ಶರಣಂ ಗಚಾಮಿ ಮತ್ತು ಅಹಿಂಸಾ ಪರಮೋಧರ್ಮ ಆಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು. ಇದೇ ವೇಳೆ ತೆಲಂಗಾಣದ ನಕ್ರೇಕಲ್‌ನಲ್ಲಿ ನಿನ್ನೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಚಾರ ನಡೆಸಿದರು. ಶಾದ್‌ನಗರದಲ್ಲಿ ನಿನ್ನೆ ನಡೆದ ಪ್ರಚಾರ ಸಭೆಯಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮಾತನಾಡಿದರು. ಅಲ್ಲದೇ, ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ ಅವರು ಸಿರ್ಸಿಲ್ಲಾದಲ್ಲಿ ನಿನ್ನೆ ರೋಡ್ ಶೋ ನಡೆಸಿದರು. ಸಿದ್ದಿಪೇಟೆಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

***********

ಗುಜರಾತ್‌ನ ದಾಹೋದ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಪ್ರಥಮಪುರ ಮತಗಟ್ಟೆಯಲ್ಲಿ ಇಂದು ಮರು ಮತದಾನ ನಡೆಯಲಿದೆ. ಬೆಳಗ್ಗೆ ೭ರಿಂದ ಸಂಜೆ ೬ರ ಗಂಟೆಯವರೆಗೆ ಮತದಾನ ನಡೆಯಲಿದೆ. ಮೇ ೭ರಂದು ನಡೆದ ಮತದಾನದಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ವರದಿಯಾದ ಹಿನ್ನೆಲೆಯಲ್ಲಿ ಮಹಿಸಾಗರ ಜಿಲ್ಲೆಯ ಸಂತ್ರಂಪುರ ತಾಲೂಕಿನ ಪ್ರಥಮಪುರ ಮತಗಟ್ಟೆಯಲ್ಲಿ ಹೊಸದಾಗಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗ ಆದೇಶಿಸಿತ್ತು. ವೈರಲ್ ಆಗಿರುವ ವಿಡಿಯೋ ಕುರಿತು ದೂರು ಸ್ವೀಕರಿಸಿ ಚುನಾವಣಾಧಿಕಾರಿ ನೀಡಿದ ಅಕ್ರಮ ವರದಿ ಆಧರಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪಾರ್ಥಂಪುರ ಮತಗಟ್ಟೆಯಲ್ಲಿ ಮತದಾನದ ದಿನದಂದು ಕರ್ತವ್ಯದಲ್ಲಿದ್ದ ನಾಲ್ವರು ಸಿಬ್ಬಂದಿ ಸೇರಿದಂತೆ ಆರು ಮಂದಿಯನ್ನು ಅಮಾನತುಗೊಳಿಸಲಾಗಿದೆ.

***********

ಮಹಾರಾಷ್ಟ್ರದಲ್ಲಿ ಪಾಲ್ಘರ್ ಲೋಕಸಭಾ ಕ್ಷೇತ್ರದಲ್ಲಿ ವಿಶೇಷ ಮತಗಟ್ಟೆಗಳನ್ನು ಚುನಾವಣಾ ಆಯೋಗ ಸ್ಥಾಪಿಸಿದೆ. ಜಿಲ್ಲೆಯ ಆರು ಸ್ಥಳಗಳಲ್ಲಿ ಯುವಕರಿಗೆ, ವಿಶೇಷಚೇತನರಿಗೆ ಮತ್ತು ಮಹಿಳೆಯರಿಗಾಗಿ ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಪಾಲ್ಘರ್ ಜಿಲ್ಲೆಯ ವಿಕ್ರಮಗಡದಲ್ಲಿ ಬುಡಕಟ್ಟು ಸಂಸ್ಕೃತಿಯನ್ನು ಪ್ರದರ್ಶಿಸುವ ವಿಶೇಷ ಮತಗಟ್ಟೆ ಸ್ಥಾಪಿಸಲಾಗಿದೆ. ಮಹಿಳೆಯರಿಗಾಗಿ ೧೪ ಸ್ಥಳಗಳಲ್ಲಿ ವಿಶೇಷ ಮತಗಟ್ಟೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮತದಾನ ಪ್ರಕ್ರಿಯೆಯನ್ನು

ಸುಗಮವಾಗಿ ನಡೆಸಲು ಸುಮಾರು ೨ ಸಾವಿರದ ೭೧೬ ನೌಕರರನ್ನು ನೇಮಿಸಲಾಗಿದೆ. ಬೋಯಿಸರ್‌ನ ವಸಾಯಿಯ ವಸಾಯಿ ವಿಧಾನಸಭಾ ಕ್ಷೇತ್ರದ ಅರ್ನಾಲಾ ಕೋಟೆ ಮತ್ತು ಪಂಜು ಮತಗಟ್ಟೆಗಳನ್ನು ತಲುಪಲು ಮತದಾರರಿಗೆ ಎಂಟು ಬೋಟ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

***********

ಫ್ರಾನ್ಸ್‌ನಲ್ಲಿ ಈ ತಿಂಗಳ ೧೪ ರಿಂದ ೨೫ರವರೆಗೆ ನಡೆಯಲಿರುವ ೭೭ನೇ ಕೇನ್ಸ್ ಚಲನಚಿತ್ರೋತ್ಸವದಲ್ಲಿ ಭಾರತ ಭಾಗಿಯಾಗಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಹಾಗೂ ಚಲನಚಿತ್ರ ಉದ್ಯಮದ ಸದಸ್ಯರನ್ನೊಳಗೊಂಡ ಭಾರತೀಯ ಕಾರ್ಪೊರೇಟ್ ನಿಯೋಗ, ವಿಶ್ವದ ಸಿನಿಮಾ ಮಾರುಕಟ್ಟೆಯಲ್ಲಿ ಭಾರತದ ಸೃಜನಶೀಲ ಆರ್ಥಿಕತೆಯನ್ನು ಪ್ರದರ್ಶಿಸಲಿದೆ. ಮೊದಲ ಬಾರಿಗೆ ಭಾರತ, ಕೇನ್ಸ್ ಚಲನಚಿತ್ರೋತ್ಸವದಲ್ಲಿ ಭಾರತ್ ಪರ್ವ್ ಆಯೋಜಿಸಲಿದೆ ಎಂದು ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯ ತಿಳಿಸಿದೆ.ಭಾರತೀಯ ಚಲನಚಿತ್ರ ಸಮುದಾಯ ವಿವಿಧ ಚುಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೇನ್ಸ್‌ನಲ್ಲಿ ಭಾರತ್ ಪೆವಿಲಿಯನ್ ವೇದಿಕೆಯಾಗಿ ಕಾರ್ಯ ನಿರ್ವಹಿಸಲಿದೆ. ಭಾರತ್ ಪರ್ವ್‌ನಲ್ಲಿ ಗೋವಾದಲ್ಲಿ ನಡೆಯುವ ೫೫ನೇ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಅಧಿಕೃತ ಪೋಸ್ಟರ್ ಮತ್ತು ಟ್ರೈಲರ್ ಬಿಡುಗಡೆ ಮಾಡಲಾಗುವುದು.

***********

ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರ ಬಿರ್ಭೂಮ್ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಏನನ್ನೂ ಮಾಡಿಲ್ಲ ಎಂದು ಬಿಜೆಪಿ ಹಿರಿಯ ನಾಯಕ ಮತ್ತು ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಬಿರ್ಭೂಮ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಬಿರ್ಭೂಮ್‌ನ ಚಕ್ಬಾರಾ ತಾರಾಪಿತ್‌ನಲ್ಲಿ ನಿನ್ನೆ ಪ್ರಚಾರ ನಡೆಸಿ, ಬಳಿಕ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಭರವಸೆ ನೀಡಿದರು. ಮಮತಾ ಬ್ಯಾನರ್ಜಿ ಅವರು ಬಿರ್ಭೂಮ್ ಜಿಲ್ಲೆಯವರಾಗಿದ್ದರೂ, ಅವರು ಈ ಜಿಲ್ಲೆಯ ಯುವಕರಿಗಾಗಿ ಏನನ್ನೂ ಮಾಡಿಲ್ಲ ಎಂದು ಅಮಿತ್ ಶಾ ದೂರಿದರು.

***********

ಕುವೈತ್‌ನ ಶೇಖ್ ಮೆಶಾಲ್ ಅಲ್ ಅಹ್ಮದ್ ಅಲ್ ಸಬಾಹ್ ಅವರು ಸಂಸತ್ತಿನ ವಿಸರ್ಜಿಸಿದ್ದಾರೆ. ರಾಜಕೀಯ ಪ್ರಕ್ಷುಬ್ಧತೆಯ ಕಾರಣ ದೇಶದ ಸಂವಿಧಾನದ ಕೆಲವು ಅಂಶಗಳನ್ನು ಮುಂದಿನ ನಾಲ್ಕು ವರ್ಷಗಳವರೆಗೆ ಅಮಾನತುಗೊಳಿಸುವುದಾಗಿ ಇದೇ ವೇಳೆ ಘೋಷಿಸಿದ್ದಾರೆ. ಈ ಅವಧಿಯಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗುವುದು ಎಂದು ಅವರು ಹೇಳಿದರು. ಕಳೆದ ತಿಂಗಳು, ಕುವೈತ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಹಿಂದಿನ ಸರ್ಕಾರದಲ್ಲಿದ್ದ ೪೬ ಸದಸ್ಯರ ಪೈಕಿ ೩೯ ಸದಸ್ಯರು ಪುನರ್ ಆಯ್ಕೆಯಾಗಿದ್ದರು.

***********

ಅಫ್ಘಾನಿಸ್ತಾನದಲ್ಲಿ, ದೇಶದ ಉತ್ತರ ಭಾಗದಲ್ಲಿ ಹಠಾತ್ ಪ್ರವಾಹದಿಂದ ಕನಿಷ್ಠ ೫೦ ಜನರು ಸಾವನ್ನಪ್ಪಿದ್ದಾರೆ ಮತ್ತು ೧೦೦ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ತಾಲಿಬಾನ್ ಅಧಿಕಾರಿಗಳ ಪ್ರಕಾರ, ಬಾಗ್ಲಾನ್ ಪ್ರಾಂತ್ಯದ ಐದು ಜಿಲ್ಲೆಗಳಲ್ಲಿ ಭಾರೀ ಮಳೆಯು ಪರಿಣಾಮ ಪ್ರವಾಹ ಉಂಟಾಗಿದೆ. ಅನೇಕ ಜನರು ಕಾಣೆಯಾಗಿರುವುದರಿಂದ ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಬಾಗ್ಲಾನ್‌ನ ನೈಸರ್ಗಿಕ ವಿಪತ್ತು ನಿರ್ವಹಣೆಯ ನಿರ್ದೇಶಕರು ಹೇಳಿದ್ದಾರೆ. ಏಪ್ರಿಲ್‌ನಿಂದ ಇಲ್ಲಿಯವರೆಗೆ ಅಫ್ಘಾನಿಸ್ತಾನದಲ್ಲಿ ಸುಮಾರು ೧೦೦ ಜನರು ಪ್ರವಾಹಕ್ಕೆ ಬಲಿಯಾಗಿದ್ದಾರೆ. ಹವಾಮಾನ ಬದಲಾವಣೆಯ ಪರಿಣಾಮಗಳಿಂದ ವಿಶ್ವದ ಅತ್ಯಂತ ಅಪಾಯಕಾರಿ ರಾಷ್ಟ್ರಗಳಲ್ಲಿ ಈ ದೇಶವು ಒಂದಾಗಿದೆ.

***********

ಭಾರತದ ವೈವಿಧ್ಯಮಯ ಮತ್ತು ರೋಮಾಂಚಕ ಜಾನಪದ ಮತ್ತು ಬುಡಕಟ್ಟು ಕಲಾ ಸಂಪ್ರದಾಯಗಳನ್ನು ಪ್ರದರ್ಶಿಸುವ 'ಸ್ವದೇಶ್' ಶೀರ್ಷಿಕೆಯ ವಿಶಿಷ್ಟ ಪ್ರದರ್ಶನವನ್ನು ದುಬೈನಲ್ಲಿ ನಡೆಸಲಾಯಿತು. 'ಸ್ವದೇಶ್' ಪ್ರದರ್ಶನವು ಮಂಜುಳಾ ಕಲೆ ಮತ್ತು ಗೊಂಡ ಕಲೆಯಂತಹ ಕಡಿಮೆ-ಪ್ರಸಿದ್ಧ ಕಲಾ ಪ್ರಕಾರಗಳಿಗೆ ವಿಶೇಷ ಗಮನವನ್ನು ನೀಡಿತು, "ಬಿಹಾರದಂತಹ ಒಂದೇ ರಾಜ್ಯದಲ್ಲಿ, ನಾವು ಮಿಥಿಲಾ ಕಲೆಯ ಜೊತೆಗೆ ಟಿಕುಲಿ ಕಲೆ ಮತ್ತು ಮಂಜೂಷಾ ಕಲೆಯಂತಹ ವಿವಿಧ ಶ್ರೀಮಂತ ಕಲಾತ್ಮಕ ಸಂಪ್ರದಾಯಗಳನ್ನು ಹೊಂದಿದ್ದೇವೆ" ಎಂದು ಆಯೋಜಕರು ತಿಳಿಸಿದ್ದಾರೆ. ಪ್ರದರ್ಶನದಲ್ಲಿ ಬಿಹಾರದ ರೋಮಾಂಚಕ ಮಿಥಿಲಾ ವರ್ಣಚಿತ್ರಗಳು, ತಮಿಳುನಾಡಿನಿಂದ

ಸಂಕೀರ್ಣವಾಗಿ ವಿನ್ಯಾಸಗೊಳಿಸಲಾದ ಕೋಲಂ ಕಲಾಕೃತಿಗಳು, ಮಹಾರಾಷ್ಟ್ರದ ಗಮನಾರ್ಹವಾದ ವಾರ್ಲಿ ಬುಡಕಟ್ಟು ಕಲೆ ಮತ್ತು ಕೇರಳದ ಪ್ರಸಿದ್ಧ ಮ್ಯೂರಲ್ ಕಲಾ ಸಂಪ್ರದಾಯದ ಪೌರಾಣಿಕ ನಿರೂಪಣೆಗಳು, ಚಿಕಿತ್ಸಕ ಮಂಡಲ ಸೇರಿದಂತೆ ವೈವಿಧ್ಯಮಯ ಜಾನಪದ ಮತ್ತು ಬುಡಕಟ್ಟು ಕಲಾಕೃತಿಗಳನ್ನು ಒಳಗೊಂಡಿತ್ತು. ಪ್ರದರ್ಶನದ ಜೊತೆಗೆ, "ಸ್ವದೇಶ್" ಕಾರ್ಯಕ್ರಮವು ಸಂವಾದಾತ್ಮಕ ಕಾರ್ಯಾಗಾರಗಳನ್ನು ಒಳಗೊಂಡಿತ್ತು, ಈ ಪ್ರದರ್ಶನದಿಂದಾಗಿ ಸಾಂಪ್ರದಾಯಿಕ ತಂತ್ರಗಳನ್ನು ಕುಶಲಕರ್ಮಿಗಳು ನೇರವಾಗಿ ಕಲಿಯಲು ಅನುವು ಮಾಡಿಕೊಡುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

***********

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಐಪಿಎಲ್ ಟಿ-೨೦ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಗುಜರಾತ್ ಟೈಟಾನ್ಸ್ ತಂಡ ೩೫ ರನ್‌ಗಳ ಗೆಲುವು ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ನಿಗದಿತ ೨೦ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೨೩೧ ರನ್‌ಗಳಿಸಿತು. ಗುಜರಾತ್ ಟೈಟಾನ್ಸ್ ತಂಡದ ನಾಯಕ ಶುಭಮನ್ ಗಿಲ್ ೫೫ ಬಾಲ್‌ಗಳಿಗೆ ೧೦೪ ರನ್ ಬಾರಿಸಿದರು. ಜತೆಯಾಟದಲ್ಲಿ ಸಾಯಿ ಸುದರ್ಶನ್ ೫೧ ಬಾಲ್‌ಗಳಿಗೆ ೧೦೩ ರನ್ ಪೇರಿಸಿ, ತಂಡದ ಮೊತ್ತ ಹೆಚ್ಚಿಸಲು ಕಾರಣವಾದರು. ಗುಜರಾತ್ ಟೈಟಾನ್ಸ್ ನೀಡಿದ ರನ್ ಗುರಿಯನ್ನು ಬೆನ್ನತ್ತಿದ್ದ ಚೆನ್ನೈ ಸೂಪರ್ ಕಿಂಗ್ಸ್, ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೧೯೬ ರನ್‌ಗಳನ್ನು ಗಳಿಸಲು ಅಷ್ಟೇ ಶಕ್ತವಾಯಿತು. ಡೇರಿಲ್ ಮಿಚೆಲ್ ೩೪ ಬಾಲ್‌ಗಳಿಗೆ ೬೩ ರನ್‌ಗಳನ್ನು ಬಾರಿಸಿದರೆ, ಮೊಯಿನ್ ಅಲಿ ೩೬ ಬಾಲ್‌ಗಳಿಗೆ ೫೬ ರನ್‌ಗಳನ್ನು ಗಳಿಸಿದರು. ಗುಜರಾತ್ ಟೈಟಾನ್ಸ್ ಬೌಲರ್‌ಗಳಾದ ಮೋಹಿತ್ ಶರ್ಮಾ ೩ ವಿಕೆಟ್ ಪಡೆದರೆ, ರಶೀದ್ ಖಾನ್ ೨ ವಿಕೆಟ್ ಉರುಳಿಸಿದರು.

******END*****